9) To incur the part expenditure towards Voluntary Retirement scheme.

10) To continue price preference to the products of VISL as hitherto.

## ರಾಜ್ಯ ಸರ್ಕಾರದ ಜಂಟಿ ಮಾಲಿಕತ್ವದಲ್ಲಿ ಕೆನರಾ ಫರ್ಟಿಲೈಜರ್ಸ್ ಮತ್ತು ಕೆಮಿಕಲ್ಸ್‌ನಲ್ಲಿ ಸರ್ಕಾರ ಹೂಡಿರುವ ಬಂಡವಾಳ

೩೨೨ (೬೬೦) ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯ ಸರ್ಕಾರದ ಜಂಟಿ ಮಾಲಿಕತ್ವದಲ್ಲಿ ಕೆನರಾ ಫರ್ಟಿಲೈಜರ್ಸ್ ಮತ್ತು ಕೆಮಿಕಲ್ಸ್ ಲಿ. ನಲ್ಲಿ (ರಾಜ್ಯ) ಸರ್ಕಾರ ಹೂಡಿರುವ ಬಂಡವಾಳದ ಪ್ರಮಾಣವೆಷ್ಟು ?

ಆ) ಈ ಸಂಸ್ಥೆಯನ್ನು ಸ್ಥಾಪಿಸಲು ಕಾರಣಗಳೇನು ?

ಇ) ಈ ಕಂಪನಿಯು ಆರ್ಥಿಕ ಹಾಗೂ ಇತರೆ ಪ್ರಗತಿ ಯಾವ ಹಂತದಲ್ಲಿದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಸರ್ಕಾರ ಯಾವ ಬಂಡವಾಳವನ್ನೂ ಹೂಡಿರಲಿಲ್ಲ. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಕೇವಲ ರೂ. ೧೦,೬೦೦ ಬಂಡವಾಳ ಮಾಡಿತ್ತು.

ಆ) ಈ ಸಂಸ್ಥೆಯನ್ನು ಕಾಸ್ಟಿಕ್ ಸೋಡ ಮತ್ತು ಫರ್ಟಿಲೈಜರ್ಸ್ ಅನ್ನು ತಯಾರಿಸಲು ಯೋಜಿಸಲಾಗಿತ್ತು.

ಇ) ಈ ಕಂಪನಿಯು ಕಾಸ್ಟಿಕ್ ಸೋಡ ಮತ್ತು ಫರ್ಟಿಲೈಜರ್ಸ್‌ಗಳನ್ನು ತಯಾರಿಸುವ ಯೋಜನೆ ಹಾಕಿತು. ಮೆ॥ಗಿ೧ ಬಿಲ್ಲಾರ್ ಫ್ರಾರ್ ಪೇಪರ್ ಮತ್ತು ಸ್ಯಾ ಬೋರ್ಡ್ ಕಂಪನಿ, ಕಲ್ಕತ್ತ ದವರಿಗೆ ಕೇಂದ್ರ ಸರ್ಕಾರವು ಲೆಟರ್ ಆಫ್ ಇಂಟೆಂಟ್ ಕೊಟ್ಟಿದ್ದರಿಂದ ಮತ್ತು ಬೇರೆ ಯಾವ ಕಾರ್ಯಕ್ರಮವು ಕಂಪನಿಯ ಮುಂದಿಲ್ಲದಿದ್ದರಿಂದಲೂ (ಸಾಲ್ಟ್ ಪ್ರಾಜೆಕ್ಟ್‌ನನ್ನೂ ಕೂಡ ಬಿಲ್ಲಾರ್ ಪುರ ಕಂಪನಿಯು ಅನ್ಯಲರಿಯಾಗಿ ತೆಗೆದುಕೊಂಡದ್ದರಿಂದ ಈ ಕಂಪನಿಯನ್ನು ಮುಚ್ಚಲು ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆ ೧೯೭೫–೭೬ರಲ್ಲಿ ನಿರ್ಧರಿಸಿ ಮುಚ್ಚಲಾಯಿತು.

## ಸ್ಯಾರಿ ಧೋತಿ ಕಾರ್ಯಕ್ರಮಕ್ಕೆ ಸರ್ಕಾರ ಮಾಡಿದ ವೆಚ್ಚ

೩೨೩ (೩೨೨) ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳ ಮತ್ತು ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ರಾಜ್ಯ ಸರ್ಕಾರವು ಸೀರೆ ಹಾಗೂ ಧೋತಿ ವಿತರಣೆಗಾಗಿ ಈ ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ೩೧ನೇ ಜನವರಿ ೧೯೮೯ರವರೆಗೆ ಎಷ್ಟು ಹಣ ಖರ್ಚು ಮಾಡಿದೆ ?

ಆ) ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ನೀಡಿರುವ ಸಬ್ಸಿಡಿ ಎಷ್ಟು ?

ಇ) ಈ ಕಾರ್ಯಕ್ರಮದ ಜಾರಿಗಾಗಿ ಉಪಯೋಗಿಸಲಾಗಿರುವ ಸೀರೆ ಹಾಗೂ ಧೋತಿಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಯಾರಿಂದ ಖರೀದಿಸಿದೆ ಹಾಗೂ ಈ ಪೂರೈಕೆದಾರರಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಕೊಡಬೇಕಾದ ಬಾಕಿ ಮೊತ್ತವೆಷ್ಟು ?